# *Form No.4.*

# *Deposition Sheet( R.P.52)*

ಹಿರಿಯ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ ಮತ್ತು ಹೆಚ್ಚುವರಿ ಮುಖ್ಯ
ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಕಾರ್ಕಳ.

**MVC: 448/2024**
**RW1**

| | | |
|---|---|---|
| ಸಾಕ್ಷಿಯ ಹೆಸರು | ಃ | ದಾಮೋದರ ಜಟ್ಟಿಪ್ಪಳ್ಳ |
| ತಂದೆ ಹೆಸರು | ಃ | ದಿ. ಸುಬ್ಬ |
| ಪ್ರಾಯ | ಃ | 57 ವರ್ಷ |
| ಉದ್ಯೋಗ | ಃ | ಅಸಿಸ್ಟೆಂಟ್ ಮ್ಯಾನೇಜರ್ |
| ವಾಸ | ಃ | ಮಂಗಳೂರು |

ದಿನಾಂಕ : 20**.02.2026** ರಂದು ಆರ್ಡಬ್ಲ್ಯೂ - 1 ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಮಾಡಿಸಲಾಯಿತು.

ಮುಖ್ಯ ವಿಚಾರಣೆಃ ಶ್ರೀ ಪಿ.ಎ.ಎಸ್., ಎದುರುದಾರರ ಪರ ವಕೀಲರಿಂದಃ

1. ನಾನು ಈ ಕೇಸಿನ ಎದುರುದಾರ. ನನ್ನ ಮುಖ್ಯ ವಿಚಾರಣೆಯ ಬದಲಿಗೆ ನಾನು ಈ ದಿನ ನ್ಯಾಯಾಲಯಕ್ಕೆ ಪ್ರಮಾಣ ಪತ್ರವನ್ನು ಸಲ್ಲಿಸುತ್ತಿದ್ದು , ಸದರಿ ಪ್ರಮಾಣ ಪತ್ರದಲ್ಲಿ ತಿಳಿಸಿರುವ ಅಂಶಗಳು ಸತ್ಯವಾಗಿವೆ. ನನಗೆ ನೀಡಿದ

ಅಧಿಕಾರ ಪತ್ರವನ್ನು ನಿಆರ್ - 1 ಎಂದು, ಚಾರ್ಜ್ ಶೀಟ್ ನ ದೃಢೀಕೃತ ನಕಲನ್ನು ನಿಆರ್ - 2 ಎಂದು, 133 ನೋಟೀಸಿನ ದೃಢೀಕೃತ ನಕಲನ್ನು ನಿಆರ್ - 3 ಎಂದು, ಅದಕ್ಕೆ ನೀಡಿದ ಪ್ರತ್ಯುತ್ತರ ನಿಆರ್ - 4 ಎಂದು, ವಿಮಾ ಪಾಲಿಸಿಯನ್ನು ನಿಆರ್ - 5 ಎಂದು ಗುರುತಿಸಲಾಯಿತು. ಆದ್ದರಿಂದ ಪ್ರಮಾಣ ಪತ್ರದಲ್ಲಿ ತಿಳಿಸಿರುವಂತೆ ಆದೇಶ ಮಾಡಬೇಕಾಗಿ ಪ್ರಾರ್ಥನೆ.

ಪಾಟೀ ಸವಾಲುಃ ಶ್ರೀ ಎಸ್.ವಿ.ಪಿ. ಅರ್ಜಿದಾರರ ಪರ ವಕೀಲರಿಂದಃ

ನಿಆರ್ - 5 ದಾಖಲೆಯು ಅಪಘಾತವಾದ ಸಮಯದಲ್ಲಿ ಊರ್ಜಿತದಲ್ಲಿತ್ತು. ಸದರಿ ಪಾಲಿಸಿಯು ಲೈಯಾಬಿಲಿಟಿ ಪಾಲಿಸಿಯಾಗಿರುತ್ತದೆ. ನಿಆರ್ - 5 ನ್ನು ನೀಡುವ ಸಮಯದಲ್ಲಿ ಯಾವ ದಾಖಲೆಗಳನ್ನು ನೋಡಿದ್ದಾರೆ ಎಂದು ನನಗೆ ಈಗ ತಿಳಿದಿಲ್ಲ. ಕಚೇರಿಯಿಂದ ನೀಡಿದ್ದು, ಆ ಸಮಯದಲ್ಲಿ ನಾನು ಇರಲಿಲ್ಲ. ಮುಂದುವರಿದು ಪರ್ಮಿಟನ್ನು ಕೇವಲ 3 ತಿಂಗಳಿಗೆ ನೀಡಲಾಗುತ್ತಿದ್ದು, ಅದನ್ನು 3 ತಿಂಗಳಿಗೊಮ್ಮೆ ನವೀಕರಿಸಬೇಕಾಗುತ್ತದೆ ಎಂದು ನುಡಿಯುತ್ತೇನೆ. ಸಾಮಾನ್ಯವಾಗಿ ಬಸ್ಸುಗಳಿಗೆ ಪರ್ಮಿಟಿನ ಅವಧಿ 5 ವರ್ಷಗಳಿಗೆ ನೀಡಬೇಕು ಎಂದರೆ ಸರಿಯಲ್ಲ. ಸದರಿ ಪರ್ಮಿಟ್ ನ ಅಡಿಯಲ್ಲಿ ಪ್ರತೀ 3 ತಿಂಗಳಿಗೊಮ್ಮೆ ಟ್ಯಾಕ್ಸ್ ಕಟ್ಟಬೇಕು ಎಂದರೆ ಸರಿ. ಟ್ಯಾಕ್ಸ್ ಪಾವತಿಸದೇ ಇದ್ದಲ್ಲಿ ಆರ್.ಟಿ.ಓ ರವರು ಸದರಿ ಬಸ್ಸುಗಳನ್ನು ವಶಪಡಿಸಿಕೊಳ್ಳುತ್ತಾರೆ ಎಂದರೆ ಸರಿ.

ಟ್ಯಾಕ್ಸ್ ಕಟ್ಟದೇ ಇದ್ದ ಸಮಯದಲ್ಲಿ ಪರ್ಮಿಟನ್ನು ರದ್ದುಗೊಳಿಸುವ ಅಧಿಕಾರ ಆರ್.ಟಿ.ಓ ದವರೆಗೆ ಮಾತ್ರ ಇರುತ್ತದೆ ಎಂದರೆ ಸರಿ. ಬಸ್ಸಿಗೆ ರೂಟ್ ಪರ್ಮಿಟನ್ನು ನೀಡಿರುತ್ತಾರೆ ಎಂದರೆ ಸರಿ. ಸದರಿ ರೂಟ್ ನಲ್ಲೇ ಬಸ್ಸನ್ನು ಚಲಾಯಿಸಬೇಕು ಎಂದರೆ ಸರಿ. ಯಾವುದೇ ಬಸ್ಸಿಗೆ ಪರ್ಮಿಟ್ ಇಲ್ಲದೇ ಅದನ್ನು ರಸ್ತೆಗೆ ಇಳಿಸುವಂತಿಲ್ಲ ಎಂದರೆ ಸರಿ. ನಾವು ಪಾಲಿಸಿ ನೀಡುವ ಸಮಯದಲ್ಲಿ ಪರ್ಮಿಟ್ ಇದ್ದು, ನಂತರ ಬಸ್ಸಿನವರು ಪರ್ಮಿಟನ್ನು ನವೀಕರಿಸಿರುವುದಿಲ್ಲ. ನಮ್ಮ ಕಚೇರಿಗೆ ಪರ್ಮಿಟನ್ನು ನೀಡುವವುದಿಲ್ಲ. ಸದರಿ ಪರ್ಮಿಟ್ ಈಗ ಚಾಲ್ತಿಯಲ್ಲಿ ಇಲ್ಲ ಎಂದು ನಾವು ಪೋಲೀಸ್ ದಾಖಲೆಗಳ ಮತ್ತು ವಾಹನದ ಚಾಲಕರು ನೀಡಿರುವ ಪ್ರತ್ಯುತ್ತರ ನಿಆರ್ - 4 ರ ಪ್ರಕಾರ ಸಾಕ್ಷಿ ಹೇಳುತ್ತಿದ್ದೇನೆ. ಸದರಿ ಬಸ್ಸಿಗೆ ಪರ್ಮಿಟ್ ಇದೆಯೋ ಇಲ್ಲವೋ ಎಂದು ನಾವು ಆರ್.ಟಿ.ಓ ದಲ್ಲಿ ಪ್ರಶ್ನಿಸಿರುವ ಕ್ರಮ ಇರುವುದಿಲ್ಲ. ನಾವು ಆರ್.ಸಿ ಮಾಲೀಕರಿಗೆ ನೊಂದಾಯಿತ ಅಂಚೆ ಮೂಲಕ ನೋಟೀಸು ನೀಡಿದ್ದು, ಅವರು ಪರ್ಮಿಟ್ ಹಾಜರುಪಡಿಸಿರುವುದಿಲ್ಲ. ಸದರಿ ಬಸ್ಸಿನ ಪರ್ಮಿಟ್ ಅಕ್ಟೋಬರ್ 2023 ರಲ್ಲಿ ಲ್ಯಾಪ್ಸ್ ಆಗಿದ್ದು, ನವೆಂಬರ್ ತಿಂಗಳಲ್ಲಿ ಅಪಘಾತವಾಗಿರುತ್ತದೆ. ನಾವು ವಿಮೆ ನೀಡುವ ವಾಹನದ ಆರ್.ಸಿ , ಎಫ್.ಸಿ , ಪರ್ಮಿಟ್ ಮತ್ತು ಹೊಗೆ ತಪಾಸಣಾ ದಾಖಲೆಗಳನ್ನು ನೋಡುತ್ತೇವೆ ಎಂದರೆ ಸರಿಯಲ್ಲ. ನಮ್ಮ ಪ್ರಕಾರ ಬಸ್ಸು ನಿಗದಿತ ರೂಟ್ ನಲ್ಲಿ ಓಡಾಡುತ್ತಿದ್ದು, ಪರ್ಮಿಟ್ ಲ್ಯಾಪ್ಸ್ ಆಗಿರುತ್ತದೆ. ಇಲ್ಲಿಯವರೆಗೆ ಸದರಿ ಪರ್ಮಿಟನ್ನು ರಿನಿವಲ್ ಮಾಡಿರುತ್ತಾರೋ ಇಲ್ಲವೋ

ಎಂದು ನಾವು ಕೇಳಿರುವುದಿಲ್ಲ. ಪರ್ಮಿಟನ್ನು ಹಾಜರುಪಡಿಸಲು ಕೇಳಿದ್ದು, ಅವರು ಹಾಜರುಪಡಿಸಿರುವುದಿಲ್ಲ.

ನಾವು ನೀಡಿರುವ ಪಾಲಿಸಿ ಟಿ.ಪಿ. ಪಾಲಿಸಿಯಾಗಿದ್ದು, ಮೃತರ ವಾರೀಸುದಾರರು ನಮ್ಮ ವಿಮೆಯಡಿ ಪರಿಹಾರ ಪಡೆಯಲು ಬಾಧ್ಯರು ಎಂದರೆ ಸರಿ. ಆದರೆ ಪರ್ಮಿಟ್ ಇರುವುದಿಲ್ಲ. ಇದರ ಬಗ್ಗೆ ಪಾಲಿಸಿ ನೀಡಿದ ವ್ಯಕ್ತಿಯೇ ಸರಿಯಾದ ಸಾಕ್ಷಿದಾರರು ಎಂದರೆ ಸರಿಯಲ್ಲ. ನನಗೆ ಈ ಪ್ರಕರಣಕ್ಕೆ ಸಾಕ್ಷಿ ನುಡಿಯಲು ಅಧಿಕಾರ ನೀಡಿರುವುದಿಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ.

(ಸಾಕ್ಷಿಯ ಹೇಳಿಕೆಯಂತೆ ನಾನು ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನ ನೀಡಿದ್ದು, ಅದರಂತೆ ಬೆರಳಚ್ಚು ಮಾಡಲಾಯಿತು).

ಓ ಹೇ ಕೇ ಸರಿ ಇದೆ

Sd/-

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಎಎಂಎಸಿಟಿ.,

ಕಾರ್ಕಳ.